ಅಂದಾಜು ವೆಚ್ಚ ರೂ.35,00,000

ಊ) ವೇಣುಗೋಪಾಲ್ ಫ್ಲೋರ್‌ಮಿಲ್ ಬೇತಿಂಗ್ ಘಾಟ್ ಚಿಕ್ಕಪೇಟೆ ಇದರ ಎದುರಿನ ಸುಲ್ತಾನ್ ಪೇಟೆ ಅಡ್ಡರಸ್ತೆಯಲ್ಲಿ 9 ಅಂಗುಲ ಒಳಚರಂಡಿ ಕೊಳವೆಯನ್ನು ಹಾಕುವ ಕಾಮಗಾರಿ ಅಂದಾಜು ವೆಚ್ಚ ರೂ.70,000.00.

ಋ) ಮನವರತಪೇಟೆಯಲ್ಲಿ 9 ಅಂಗುಲ, 12 ಅಂಗುಲ ಹಾಗೂ 450 ಎಂ.ಎಂ. ಆರ್.ಸಿ.ಸಿ. ಒಳಚರಂಡಿ ಮುಖ್ಯ ಕೊಳವೆಯನ್ನು ಹಾಕುವ ಕಾಮಗಾರಿ ಅಂದಾಜು ವೆಚ್ಚ ರೂ.4,30,000.00

ಌ) ಬಿ.ವಿ.ಕೆ.ಅಯ್ಯಂಗಾರ್ ರಸ್ತೆಯ ಕೆ.ವಿ.ಟೆಂಪಲ್ ರಸ್ತೆಯಲ್ಲಿ 450 ಎಂ.ಎಂ. ಮತ್ತು 600 ಎಂಎಂ. ಆರ್.ಸಿ.ಸಿ. ಒಳಚರಂಡಿ ಮುಖ್ಯ ಕೊಳಚೆಯನ್ನು ಹಾಕುವ ಕಾಮಗಾರಿ ಅಂದಾಜು ವೆಚ್ಚ ರೂ.12,00,000.00

ಎ) ಎ.ಎಸ್.ಆರ್.ರಸ್ತೆ ಸುಲ್ತಾನ್ ಪೇಟೆಯಲ್ಲಿ ಎರಡು ಸ್ಲಡ್ಜ್ ಪಂಪ್‌ಗಳನ್ನು ಅಳವಡಿಸಲಾಗಿದೆ.

ಏ) ಒಳಚರಂಡಿ ಕೊಳವೆಗಳನ್ನು ಆಗಿಂದಾಗ್ಗೆ ಶುಚಿಗೊಳಿಸಿ ಕೊಳಚೆ ನೀರು ಸರಾಗವಾಗಿ ಹರಿಯಲು, ಬೆಂಗಳೂರು ಜಲ ಮಂಡಲಿಯು ಕೊಳವೆಗಳನ್ನು ಶುಚಿಗೊಳಿಸುವ ಯಂತ್ರಗಳನ್ನು ಸಹ ಬಳಸುತ್ತಿದೆ.

3. ಜೂನ್ 2002ಕ್ಕೆ ಈ ಕಾಮಗಾರಿಗಳನ್ನು ಮುಗಿಸಲು ಕಾಲಮಿತಿ ನಿಗದಿಗೊಳಿಸಿದೆ.

ಹುಡ್ಕೋ ಯೋಜನೆಯಡಿಯಲ್ಲಿ ಪಟ್ಟಣ ಹಾಗೂ ನಗರ ರಸ್ತೆ ನಿರ್ಮಾಣ ಮಾಡಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ: 111(476)

ಸದಸ್ಯರ ಹೆಸರು: ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ.ಕೆ(ಕೋಲಾರ)

ಉತ್ತರಿಸಬೇಕಾದ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನಸ್ವಾಮಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ಹುಡ್ಕೋ ಯೋಜನೆಯಡಿಯಲ್ಲಿ ನಗರ ಹಾಗೂ ಪಟ್ಟಣಗಳಲ್ಲಿ ರಸ್ತೆ

ನಿರ್ಮಾಣಕ್ಕಾಗಿ 100 ಕೋಟಿ ರೂ. ಮಂಜೂರಾಗಿರುತ್ತದೆಯೆ?

ಆ) ಮಂಜೂರು ಆಗಿದ್ದಲ್ಲಿ ಈ ಯೋಜನೆಯಡಿ ಯಾವ ಪಟ್ಟಣ ನಗರ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಇ) ಯಾವ ಯಾವ ಪಟ್ಟಣ ನಗರಗಳಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ?

ಈ) ಪೂರ್ಣಗೊಂಡಿದ್ದಲ್ಲಿ ಒಟ್ಟಾರೆ ಆದ ಖರ್ಚು ಎಷ್ಟು? (ವಿವರ ನೀಡುವುದು)

ಉ) ಅಪೂರ್ಣ ಕಾಮಗಾರಿಗಳು ಯಾವುವು? ಅದಕ್ಕೆ ಕಾರಣಗಳೇನು?

ಊ) ಈ ಕಾಮಗಾರಿಗಳು ಮಾಡುತ್ತಿದ್ದಾಗ ಸಂಬಂಧಪಟ್ಟ ಪುರಸಭೆ, ನಗರಸಭೆ ಹಾಗೂ ಮಹಾನಗರಪಾಲಿಕೆಗಳ ಉಸ್ತುವಾರಿಯಲ್ಲಿ ಕೆಲಸ ನಡೆಯುತ್ತಿದೆಯೇ?

ಋ) ಈಗ ಈ ಹಣಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟಿದ್ದು, ಮೇಲ್ಕಂಡ ಸಂಸ್ಥೆಗಳಿಂದ ವಸೂಲಿ ಮಾಡಲಾಗುತ್ತಿದೆಯೇ?

ಉತ್ತರ

ಅ) ಹೌದು.

ಆ) ರಾಜ್ಯದ 201 ಪಟ್ಟಣ ಪ್ರದೇಶಗಳಲ್ಲಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) ಬಿಜಾಪುರ, ಬಸವಬಾಗೇವಾಡಿ, ಹುನಗುಂದ, ರಾಯಭಾಗ, ಅಥಣಿ, ಕುಡಚಿ, ಬಾದಾಮಿ, ಕೆಂಗೇರಿ ಹಾಗೂ ಹರಪ್ಪನಹಳ್ಳಿ.

ಈ) ಒಟ್ಟು ರೂ.402.25 ಲಕ್ಷಗಳು.

ಬಿಜಾಪುರ	:	106.53
ಬಸವನಬಾಗೇವಾಡಿ	:	31.77
ಹುನಗುಂದ	:	32.28
ರಾಯಭಾಗ್	:	23.76
ಅಥಣಿ	:	65.00
ಕುಡಚಿ	:	12.91

ಬಾದಾಮಿ	:	32.50
ಕೆಂಗೇರಿ	:	65.00
ಹರಪ್ಪನಹಳ್ಳಿ	:	32.50

ಉ) ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ರಸ್ತೆಗಳ ಡಾಂಬರೀಕರಣದ ಕಾಮಗಾರಿಗಳು ಮಳೆಗಾಲದ ಪ್ರಯುಕ್ತ ನಿಧಾನವಾಗಿದ್ದು ಈಗ ಪ್ರಗತಿಯಲ್ಲಿದೆ.

ಊ) ಇಲ್ಲ.

ಋ) ಕಾಮಗಾರಿಗಳು ಪ್ರಗತಿಯಲ್ಲಿದ್ದು ಮುಂದಿನ 14 ವರ್ಷಗಳಲ್ಲಿ ಕಂತುಗಳಲ್ಲಿ ಸಾಲ ವಸೂಲಿ ಮಾಡಬೇಕಾಗುತ್ತದೆ.

ಬೆಂಗಳೂರು ನಗರದಲ್ಲಿ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 113(478)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡುರಾವ್(ಗಾಂಧಿನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಬೆಂಗಳೂರು ನಗರದಲ್ಲಿ ಸಂಚಾರ ಒತ್ತಡದಿಂದಾಗಿ ರೈಲ್ವೆ ಸೇತುವೆ ರಸ್ತೆಗಳನ್ನು ಅಗಲಗೊಳಿಸುವ ಕಾಮಗಾರಿ ನಡೆಯುತ್ತಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಯಾವ ಯಾವ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪೂರ್ಣಗೊಂಡಿರುವ ಕಾಮಗಾರಿಗಳಾವುವು?

ಇ) ನೆಹರು ನಗರ (ಶಿವಾನಂದ ವೃತ್ತದ ಬಳಿ)ದಲ್ಲಿರುವ ರೈಲ್ವೆ ಸೇತುವೆ ರಸ್ತೆ ಅಗಲಗೊಳಿಸುವ ಕಾಮಗಾರಿಯನ್ನು ಎಷ್ಟು ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಉತ್ತರ

ಅ) ಇಲ್ಲ. ಆದಾಗ್ಯೂ ರಸ್ತೆ ಮೇಲು ಸೇತುವೆ ನಿರ್ಮಾಣ ಹಾಗೂ ಕೆಳಸೇತುವೆ